# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪರ ನಿರ್ದೇಶಕರು, ನಗರ ಯೋಜನೆ, ಕೇಂದ್ರ ಕಛೇರಿ, ಎನ್.ಆರ್ ಚೌಕ ಬೆಂಗಳೂರು-560002

ಸಂಖ್ಯೆ: ಮು.ಆ/ಪಿಆರ್/ (ಜಿ)750 /2024-25 ದಿನಾಂಕ: 21/12/24

## ಕಛೇರಿ ಆದೇಶ

ವಿಷಯ: ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಮೀಕ್ಷೆ ನಡೆಸಿ ಅನಧಿಕೃತವಾಗಿ/ ಮಂಜೂರಾತಿ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಿಸುತ್ತಿರುವವರ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ

ಉಲ್ಲೇಖ:
1. ಪಾಲಿಕೆಯ ಕಛೇರಿ ಆದೇಶ ಸಂ: ಮುಆ/ಪಿಆರ್(ಜಿ)2072/24-25 ದಿ: 18-10-2024
2. ಪಾಲಿಕೆಯ ಕಛೇರಿ ಆದೇಶ ಸಂ: ಮುಆ/ಪಿಆರ್(ಜಿ)2596/24-25 ದಿ: 06-12-2024
3. ಪಾಲಿಕೆ ಕಚೇರಿ ಆದೇಶ ಸಂಖ್ಯೆ: ಮು.ಆ/ಬೃಬೆಂಮಪಾ/ಪಿಆರ್(ಜಿ)/2254/24-25 ದಿನಾಂಕ: 05-11-2024
4. ಪಾಲಿಕೆಯ ಸುತ್ತೋಲೆ ಸಂ: ಹೆನಿನಯೋ/ಪಿಆರ್/1865(ಎ)/24-25 ದಿ: 23-10-2024
5. ಘನ ಸರ್ವೋಚ್ಚ ನ್ಯಾಯಾಲದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022 C/W ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ: 162/2022 ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 328/2022 ಪ್ರಕರಣಗಳಲ್ಲಿ ದಿನಾಂಕ: 13-11-2024 ರಂದು ಘನ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶ

* * * * * * *

ol

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಕ್ಷೆ ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು. ಇದನ್ನು ಸಮರ್ಪಕವಾಗಿ ತಡೆಯಲು ಸೂಕ್ತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

ಈ ಸಂಬಂಧ ಉಲ್ಲೇಖ (1) ರಿಂದ (3) ರವರೆಗಿನ ಆದೇಶಗಳಲ್ಲಿ ಮಂಜೂರಾತಿ ನಕ್ಷೆ ಮತ್ತು ನಿಯಮಾವಳಿಗಳನ್ನು ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವಿರುದ್ಧ ಬಿಬಿಎಂಪಿ ಕಾಯ್ದೆ – 2020 ರ ಕಲಂ 248 ಮತ್ತು 356 ರಡಿಯಲ್ಲಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 15(4) ರಡಿಯಲ್ಲಿ ಕ್ರಮ ಜರುಗಿಸಲು ವಿವರವಾದ ಮಾರ್ಗಸೂಚಿ ಹಾಗೂ ಕಾರ್ಯವಿಧಾನವನ್ನು ಈಗಾಗಲೇ ನೀಡಲಾಗಿದ್ದು, ಅದರಂತೆ ಅನಧಿಕೃತವಾಗಿ/ ನಕ್ಷೆ ಉಲ್ಲಂಘನೆ ಮಾಡಿ ನಿಮಾಣಗೊಳ್ಳುತ್ತಿರುವ ಕಟ್ಟಡವನ್ನು ಗುರುತಿಸಿ ಅವುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.

ಪಾಲಿಕೆಯ ಉಲ್ಲೇಖ (4) ರ ಸುತ್ತೋಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡ್‌ವಾರು, ನಿರ್ಮಾಣ ಹಂತದಲ್ಲಿರುವ ಎಲ್ಲಾ ಕಟ್ಟಡಗಳ ಸಮೀಕ್ಷೆ ನಡೆಸಿ ನಿಗಧಿತ ನಮೂನೆಯಲ್ಲಿ ವಿವರಗಳನ್ನು ಸಿದ್ದಪಡಿಸಿಕೊಂಡು ಅಂತಹ ಕಟ್ಟಡಗಳ ವಿರುದ್ಧ ಮಾರ್ಗಸೂಚಿಯಂತೆ ಮತ್ತು ಬಿಬಿಎಂಪಿ ಕಾಯ್ದೆ 2020ರ ಕಲಂ 248 ಮತ್ತು 356 ರಡಿಯಲ್ಲಿ ಉಲ್ಲೇಖ (3) ರಂತೆ ನೋಟಿಸ್ ನೀಡಿ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಸದರಿ ವಿವರಗಳನ್ನು ಪಾಲಿಕೆಯ ಅಂತರ್ಜಾಲ ತಂತ್ರಾಂಶದಲ್ಲಿ ಪ್ರಚುರಪಡಿಸಲು ಆದೇಶಿಸಲಾಗಿರುತ್ತದೆ.

ಆದರೆ ಈ ವಿಷಯದಲ್ಲಿ ಪರಿಶೀಲಿಸಲಾಗಿ ಅನಧಿಕೃತ ನಿರ್ಮಾಣಗಳ/ ನಕ್ಷೆ ಮಂಜೂರಾತಿ ಉಲ್ಲಂಘಿಸಿ ನಿರ್ಮಾಣಗಳ ವಿರುದ್ಧ ಕ್ರಮ ಜರುಗಿಸುವ ಕಾರ್ಯವು ಮಂದಗತಿಯಲ್ಲಿ ನಡೆಯುತ್ತಿರುವುದನ್ನು ಗಮನಿಸಲಾಗಿರುತ್ತದೆ. ಉಲ್ಲೇಖ (5)ರಲ್ಲಿ ಘನ ಸರ್ವೋಚ್ಚ ನ್ಯಾಯಾಲಯ ಕೂಡ ಈ ಬಗ್ಗೆ ಇತ್ತೀಚೆಗೆ ಆದೇಶಗಳನ್ನು ನೀಡಿ ಅನಧಿಕೃತ ಕಟ್ಟಡಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾರ್ಯವನ್ನು ತ್ವರಿತಗೊಳಿಸಿ ಅನಧಿಕೃತ ಕಟ್ಟಡಗಳು/ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡಿದ ಕಟ್ಟಡಗಳ ವಿರುದ್ದ ಶೀಘ್ರ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
3) ವಲಯಗಳ ಆಯುಕ್ತರು ಮತ್ತು ಜಂಟಿ ಆಯುಕ್ತರು (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ/ ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಮುಖ್ಯ ನಗರ ಯೋಜಕರು, ಬಿಬಿಎಂಪಿ ರವರ ಮಾಹಿತಿಗಾಗಿ.
5) ಮುಖ್ಯ ಅಭಿಯಂತರರು (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ/ ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಸೂಕ್ತ ಕ್ರಮಕ್ಕಾಗಿ.
6) ಜಂಟಿ ನಿರ್ದೇಶಕರು (ನಗರ ಯೋಜನೆ-ಕೇಂದ್ರ ಕಚೇರಿ ಉತ್ತರ ಮತ್ತು ದಕ್ಷಿಣ) (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ /ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
7) ಕಛೇರಿ ಪ್ರತಿ